**Fax:** 08282-256262
**E-mail:kuvempuacademic@gmail.com**

Phone No - 08282-256149
**Website:** www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

**ಶೈಕ್ಷಣಿಕ ವಿಭಾಗ,** ವಿಶ್ವವಿದ್ಯಾಲಯ ಕಾರ್ಯಾಲಯ, ಕುವೆಂಪು ಶತಮಾನೋತ್ಸವ ಭವನ,
ಜ್ಞಾನಸಹ್ಯಾದ್ರಿ, ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ-4(184): 1895 :2026-27

ದಿನಾಂಕ:13-08-2026

## ಸುತ್ತೋಲೆ

**ವಿಷಯ: 2026-27ನೇ ಶೈಕ್ಷಣಿಕ ಸಾಲಿನ ಸ್ನಾತಕೋತ್ತರ ಪದವಿ ಪ್ರವೇಶಾತಿಯಲ್ಲಿ ರಿಕ್ತ ಸ್ಥಾನಗಳನ್ನು ಭರ್ತಿ ಮಾಡುವ ಕುರಿತು.**

ಉಲ್ಲೇಖ:
1. ಈ ಕಛೇರಿ ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ-4:184 :1102:2026-27, ದಿನಾಂಕ:29-06-2026.
2. ಈ ಕಛೇರಿ ಪರಿಷ್ಕೃತ ಅಧಿಸೂಚನೆ ಸಂಖ್ಯೆ:ಕುವಿ:ಶೈವಿ:ಎಸಿ-4:184:1488:2026-27, ದಿನಾಂಕ:18-07-2026.
3. ಈ ಕಛೇರಿ ಪರಿಷ್ಕೃತ ಅಧಿಸೂಚನೆ-1ರ ಸಂಖ್ಯೆ:ಕುವಿ:ಶೈವಿ:ಎಸಿ-4:184:1494:2026-27, ದಿನಾಂಕ:20-07-2026.
4. ದಿನಾಂಕ:07-08-2026ರಂದು ನಡೆದ ಪ್ರವೇಶಾತಿ ಕೌನ್ಸಿಲಿಂಗ್ ಸಮಿತಿ ಸಭೆಯ ನಿರ್ಣಯ.
5. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:13-08-2026.

*****

ವಿಶ್ವವಿದ್ಯಾಲಯದ 2026-27ನೇ ಸಾಲಿನ ಪ್ರಥಮ ವರ್ಷದ ಸ್ನಾತಕೋತ್ತರ ಪ್ರವೇಶಾತಿಗೆ ಸಂಬಂಧಿಸಿದಂತೆ ಉಲ್ಲೇಖಿತ(1), (2) ಮತ್ತು (3)ರಲ್ಲಿ ಅಧಿಸೂಚನೆಗಳನ್ನು ಹೊರಡಿಸಲಾಗಿದ್ದು, ಪ್ರವೇಶಾತಿ ಕೌನ್ಸಿಲಿಂಗ್ ಪ್ರಕ್ರಿಯೆಗಳನ್ನು **ದಿನಾಂಕ:13-08-2026 ಮತ್ತು 14-08-2026ರಂದು** ಆಯಾ ಸ್ನಾತಕೋತ್ತರ ವಿಭಾಗಗಳಲ್ಲಿ ನಡೆಸಲಾಗುತ್ತಿದೆ. ಮುಂದುವರೆದಂತೆ, ಕೆಲವು ಸ್ನಾತಕೋತ್ತರ ಅಧ್ಯಯನ ವಿಭಾಗಗಳಲ್ಲಿ ನಿಗದಿತ ಮೆರಿಟ್ ಕೋಟಾದಡಿ ಪ್ರವೇಶಮಿತಿ ಭರ್ತಿಯಾಗದಿರುವ ಕುರಿತು ವಿಭಾಗಾಧ್ಯಕ್ಷರುಗಳು ಮೌಖಿಕವಾಗಿ ಉಲ್ಲೇಖಿತ (4)ರ ಸಭೆಯಲ್ಲಿ ಕೋರಿರುವ ಹಿನ್ನೆಲೆಯಲ್ಲಿ, ಸದರಿ ಸಭೆಯ ನಿರ್ಣಯದನ್ವಯ ಹಾಗೂ ಉಲ್ಲೇಖಿತ (5)ರ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಆಯಾ ವಿಭಾಗಕ್ಕೆ ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ನಿಗದಿಪಡಿಸಿರುವ ಪ್ರವೇಶಮಿತಿಗೊಳಪಟ್ಟು ಕೆಳಕಂಡಂತೆ ಪ್ರವೇಶಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆ.

1. **ದಿನಾಂಕ:13-08-2026ರಂದು ಮೆರಿಟ್ ಕೋಟಾದಡಿಯಲ್ಲಿ ಪ್ರವೇಶಾತಿ ಭರ್ತಿಯಾಗಿ, ಬಾಕಿ ಉಳಿದಿರುವ ಮೆರಿಟ್ ಕಮ್ ಪೇಮೆಂಟ್ ಕೋಟಾದ ಹಾಗೂ ಅನ್ಯ ವಿಶ್ವವಿದ್ಯಾಲಯದ ಸೀಟುಗಳಿಗೆ 2026-27ನೇ ಸಾಲಿನಲ್ಲಿ ಪ್ರಕಟಿಸಿರುವ ಪೇಮೆಂಟ್ ಶುಲ್ಕದಲ್ಲಿ ಶೇ.20ರಷ್ಟು ಕಡಿತಗೊಳಿಸಿ, ದಿನಾಂಕ:14-08-2026 ರಿಂದ 31-08-2026ರವರೆಗೆ ಪ್ರವೇಶಾತಿಯಾಗುವ ಅರ್ಹ ಅಭ್ಯರ್ಥಿಗಳಿಗೆ ಪ್ರವೇಶಾತಿ ಮಾಡಿಕೊಳ್ಳುವುದು.**
2. ಸೀಟ್ ಮ್ಯಾಟ್ರಿಕ್ಸ್‌ನಲ್ಲಿ ಮೆರಿಟ್‌ಗೆ ನಿಗದಿಪಡಿಸಿದ ಸೀಟುಗಳಿಗಿಂತ ಕಡಿಮೆ ಅರ್ಜಿಗಳು ಬಂದಂತಹ ಸಂದರ್ಭದಲ್ಲಿ ಅಂತಹ ವಿಭಾಗಾಧ್ಯಕ್ಷರುಗಳು ಉಳಿದ ಮೆರಿಟ್ ರಿಕ್ತ ಸ್ಥಾನಗಳನ್ನು ಕುವೆಂಪು ವಿದ್ಯಾರ್ಥಿಗಳಿಗೆ ನಿಗದಿಪಡಿಸಿದ ಶುಲ್ಕಗಳನ್ನು ಪಾವತಿಸಿಕೊಂಡು ಪ್ರವೇಶಾತಿ ಮಾಡಿಕೊಳ್ಳುವುದು.
3. ಕುವೆಂಪು ವಿಶ್ವವಿದ್ಯಾಲಯದ ಯಾವುದೇ ಮೆರಿಟ್ ಕೋಟಾದಡಿ ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದ ಪಕ್ಷದಲ್ಲಿ ಅನ್ಯ ವಿಶ್ವವಿದ್ಯಾಲಯಗಳ ಅರ್ಹ ಅಭ್ಯರ್ಥಿಗಳನ್ನು ಕುವೆಂಪು ವಿಶ್ವವಿದ್ಯಾಲಯದ ಅಭ್ಯರ್ಥಿಗಳೆಂದೇ ಪರಿಗಣಿಸಿ ಪ್ರವೇಶಾತಿ ಮಾಡಿಕೊಳ್ಳುವುದು.
4. **ಮೆರಿಟ್ ಕಮ್ ಪೇಮೆಂಟ್ ಕೋಟಾದಡಿ ಪ್ರವೇಶಾತಿ ಮಾಡಿಕೊಂಡನಂತರ ವಿಭಾಗಗಳಲ್ಲಿ ಖಾಲಿ ಉಳಿಯುವ ಸೀಟುಗಳನ್ನು ಮೆರಿಟ್ ಕಮ್ ಪೇಮೆಂಟ್ ಕೋಟಾದಡಿಯಲ್ಲಿಯೇ ಭರ್ತಿಮಾಡಿಕೊಳ್ಳುವುದು.**

**ಕುಲಸಚಿವರು**
**ಕುವೆಂಪು ವಿಶ್ವವಿದ್ಯಾನಿಲಯ**
**ಜ್ಞಾನ ಸಹ್ಯಾದ್ರಿ**
**ಶಂಕರಘಟ್ಟ-577 451.**
**ಶಿವಮೊಗ್ಗ ಜಿಲ್ಲೆ.**

**ಗೆ,**

ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು/ ಸಂಯೋಜನಾಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.

**ಪ್ರತಿಗಳು:**

1. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು: ಕುಲಸಚಿವರು(ಪ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಕಛೇರಿ ಪ್ರತಿ.